# 12

# “ಸಮೀಪವಾಯಿತು!”

## ಓದುವ ಮನೆಪಾಠ #3

II. ಸ್ನಾನಿಕನಾದ ಯೋಹಾನನ ಸೇವೆಯ ಆರಂಭ.
- A. ಯೋಹಾನನ ಸೇವೆ (ಮತ್ತಾಯ 3:1-6; ಮಾರ್ಕ 1:1-6; ಲೂಕ 3:1-6).
- B. ಯೋಹಾನನ ಸಂದೇಶ (ಮತ್ತಾಯ 3:7-12; ಮಾರ್ಕ 1:7, 8; ಲೂಕ 3:7-18).

III. ಯೇಸುವಿನ ಸೇವೆಯ ಆರಂಭ
- A. ಯೇಸು, ಸ್ನಾನಿಕನಾದ ಯೋಹಾನನಿಂದ ಯೋರ್ದಾನ್ ಹೊಳೆಯಲ್ಲಿ ದೀಕ್ಷಾಸ್ನಾನ ಹೊಂದಿದ್ದು (ಮತ್ತಾಯ 3:13-17; ಮಾರ್ಕ 1:9-11; ಲೂಕ 3:21, 22; ಯೋಹಾನ 1:31-34).
- B. ಅರಣ್ಯದಲ್ಲಿ ಶೋಧನೆಗೆ ಒಳಗಾಗಿದ್ದು (ಮತ್ತಾಯ 4:1-11; ಮಾರ್ಕ 1:12, 13; ಲೂಕ 4:1-13).
- C. ಯೋಹಾನನು, ಯೇಸುವಿನ ಕುರಿತು ನೀಡಿದ ಸಾಕ್ಷಿ (ಯೋಹಾನ 1:19-34).

## ಪೀಠಿಕೆ

“ಆ ದಿನಗಳಲ್ಲಿ ಸ್ನಾನಿಕನಾದ ಯೋಹಾನನು, ಪರಲೋಕರಾಜ್ಯವು[1] ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಯುದಾಯದ ಅಡವಿಯಲ್ಲಿ ಸಾರಿ ಹೇಳುತ್ತಾ ಬಂದನು” (ಮತ್ತಾಯ 3:1, 2). ಆತನ ಕೇಳುಗರು ಈ ವಾರ್ತೆಯನ್ನು ಕೇಳಿ ಎಷ್ಟು ಆನಂದಭರಿತರಾಗಿರಬಹುದು! ಮೆಸ್ಸೀಯನ ಆಳ್ವಿಕೆಯ ಸಮಯ ಸಮೀಪವಾಗಿತ್ತು. ಮೆಸ್ಸೀಯನು ಬೇಗನೆ ಬರಲಿದ್ದನು!

“ನಮಗಾಗಿ ಒಂದು ಮಗು ಜನಿಸಿದೆ” ಎಂಬ ಹೇಳಿಕೆಯು, ಯೇಸುವಿನ ಮೂವತ್ತು ವರ್ಷಗಳ ಜೀವಿತದ ಕಾಲಾವಧಿಯಲ್ಲಿ ಪ್ರಸಿದ್ಧಿಗೊಂಡಿತ್ತು. ನಂತರದಲ್ಲಿ ಯೇಸು ತಾನೇ ಕ್ರಿಸ್ತನು ಎಂದು ಪ್ರಚುರಪಡಿಸಿದ್ದನು. ಈ ಎರಡರ ನಡುವೆ ಅಂತಿಮ ಸಿದ್ಧತೆ ಬಹು ಪ್ರಮುಖವಾಗಿತ್ತು. ಯೇಸುವಿನ ಸಾರ್ವಜನಿಕ ಸೇವೆಗೆ ಸಿದ್ಧನಾದ ಕುರಿತು ಮುಂದಿನ ಪಾಠವನ್ನು ಗಮನಿಸೋಣ.

## ಮೆಸ್ಸೀಯನ ಬರೋಣದ ಹಾರೈಕೆ

## (ಮತ್ತಾಯ 3:1-12 ಮಾರ್ಕ 1:1-8 ಲೂಕ 3:1-18)

ಮೆಸ್ಸೀಯನಿಗಿಂತ ಮೊದಲು ಆತನಿಗಿಂತ ದಾಲಿಸಿದ್ಧಮಾಡುವವನ ಕುರಿತು ಪ್ರವಾದಿಗಳು ಮುಂತಿಳಿಸಿದ್ದರು (ಯೆಶಾಯ 40:3-5; ಮಲಾಕಿ 3:1; 4:5, 6). ನನ್ನ ಮಗನಾದ ಯೋಹಾನನ್ನೇ ಮಾರ್ಗಸಿದ್ಧ ಮಾಡುವವನು ಎಂದು ಜಕರೀಯನಿಗೆ ತಿಳಿಸಲಾಗಿತ್ತು (ಲೂಕ 1:17). ಮಾರ್ಗ ಸಿದ್ಧತೆ ಮಾಡುವ ಯೋಹಾನನ ಕುರಿತು ಯೆಶಾಯನು ಹೋಲಿಕೆ ಮಾಡಿರುವನು,

ಇದು ಬರೆದಿರುವ ಮಾತಿಗೆ ಅನುಸಾರವಾಗಿ ನಡೆಯಿತು. ಆ ಮಾತು ಏನಂದರೆ,

ಕರ್ತನ ದಾರಿಯನ್ನು ಸಿದ್ಧಮಾಡಿರಿ,
ಆತನ ಹಾದಿಗಳನ್ನು ನೆಟ್ಟಗೆ ಮಾಡಿರಿ.
ಎಲ್ಲಾ ಹಳ್ಳಕೊಳ್ಳಗಳು ಮುಚ್ಚಲ್ಪಡುವವು,
ಎಲ್ಲಾ ಬೆಟ್ಟಗುಡ್ಡಗಳು ತಗ್ಗಿಸಲ್ಪಡುವವು (ಲೂಕ 3:4, 5; ನೋಡಿರಿ ಯೆಶಾಯ 40:3, 4).

ಹಿಂದಿನ ಕಾಲದಲ್ಲಿ ಅರಸನು ಪ್ರಯಾಣ ಮಾಡುವ ಮೊದಲು, ಅವನ ಜನರು ಮುಂದಾಗಿ ಹೋಗಿ ರಸ್ತೆಗಳನ್ನು ಸರಿಪಡಿಸುತ್ತಿದ್ದರು. ಪ್ರವಾದಿಯು ಈ ಚಿತ್ರಣವನ್ನೇ ನೀಡಿರುವನು. ಆದರೆ ಇಲ್ಲಿ ಯೋಹಾನನು ರಸ್ತೆಯ ದುರಸ್ತಿಮಾಡದೆ, ಜನರ ಹೃದಯಗಳನ್ನು ಸಿದ್ಧಪಡಿಸುತ್ತಿರುವನು. ಬಂಡೆ ಕಲ್ಲುಗಳನ್ನು ತೆಗೆದುಹಾಕದೆ, ಜನರ ಹೃದಯದಲ್ಲಿದ್ದ ಅಹಂಭಾವವನ್ನು ತೆಗೆದು ಹಾಕುತ್ತಿರುವನು. ಮೆಸ್ಸೀಯನ ಕುರಿತು ಇದ್ದ ಅನರ್ಥವನ್ನು ತೆಗೆದು ಸತ್ಯವನ್ನು ಪ್ರಚುರಮಾಡಬೇಕಿತ್ತು.

ಮೆಸ್ಸೀಯನ ಕುರಿತು ಯೆಹೂದ್ಯರು ಅಪಾರ್ಥ ಮಾಡಿಕೊಂಡಿದ್ದರು. ಆತನು ಲೋಕದ ಅರಸನಾಗಿ, ವೈರಿಗಳಿಂದ ಅವರನ್ನು ವಿಮುಕ್ತರನ್ನಾಗಿ ಮಾಡುವನು ಎಂದು ನಂಬಿದ್ದರು. ಆದರೆ ಮೆಸ್ಸೀಯನು ಆತ್ಮೀಕ ರಾಜ್ಯವನ್ನು ವಿಸ್ತರಿಸಿ, *ಆತ್ಮೀಕ* ಪರಿಸರವನ್ನು ಬಯಸುವನು ಎಂದು ಯೋಹಾನನು ತಿಳಿಸಿದನು.

**ಯೋಹಾನನ ಪ್ರಸಂಗ**[2]

ಯೋಹಾನನು ಅಡವಿಯಲ್ಲಿದ್ದ ಚಿತ್ರಣವನ್ನು ತಿಳಿದಿದ್ದೇವೆ (ಲೂಕ 1:80).[3] ಅಡವಿಯಲ್ಲಿ ಅವನು ಏಕಾಂಗಿಯಾಗಿದ್ದನು. ಒರಟಾದ ಉಡುಪನ್ನು ತೊಟ್ಟು (ಮತ್ತಾಯ 3:4; ನೋಡಿರಿ 2 ಅರಸು 1:8); ಮಿಡತೆ ಹಾಗೂ ಜೇನು ಅವನಿಗೆ ಆಹಾರವಾಗಿತ್ತು (ಮತ್ತಾಯ 3:4).

ನಂತರದಲ್ಲಿ ಅವನಿಗೆ ದೇವರ ವಾಕ್ಯವುಂಟಾಯಿತು (ಲೂಕ 3:2) - ಅದು ಅವನ ಪ್ರಸಂಗಕ್ಕೆ ಸೂಚನೆಯಾಯಿತು. ಅವನ ಆರಂಭದ ಸೇವೆಯ ಕುರಿತು ಲೂಕನು (3:1, 3). ಐದು ರಾಜಕೀಯ ವ್ಯಕ್ತಿಗಳನ್ನು[4] ಎರಡು ಧಾರ್ಮಿಕ ನಾಯಕರನ್ನು ತಿಳಿಸಿರುವನು[5] (ಲೂಕ 3:1, 3).

"ಮಾನಸಾಂತರ" ಎಂಬುದು ಯೋಹಾನನ ಪ್ರಸಂಗದ ಮುಖ್ಯಾಂಶವಾಗಿತ್ತು (ಮತ್ತಾಯ 3:2). "ಮನಾಸಾಂತರ" ಎಂದರೆ "ಜೀವಿತವನ್ನು ಬದಲು ಮಾಡುವ ಮನಸ್ಸನ್ನು ಹೊಂದಿಕೋ" ಮಾನಸಾಂತರ ಪಡದವರು ದೇವರ ಕೋಪಕ್ಕೆ ತುತ್ತಾಗುವರು (ಮತ್ತಾಯ 3:7, 10; ಲೂಕ 3:9). ದೇವರ ರಾಜ್ಯವು ವಂಶಸ್ಥರಿಗೆ ಒಳಗಾಗದೇ, ನೈತಿಕ ಮೌಲ್ಯ ಹೊಂದಿದವರಿಗಾಗಿ ಮೀಸಲಿರುತ್ತದೆ (ಮತ್ತಾಯ 3:8, 9; ಲೂಕ 3:8).

ಯೋಹಾನನು ಸಾಮಾನ್ಯವಾದ ಬದಲಾವಣೆಯ ಕುರಿತು ಮಾತಾಡದೆ, ನಿರ್ಧಿಷ್ಟವಾದದ್ದನ್ನು ತಿಳಿಸಿರುವನು. "ಮನಸ್ಸು ದೇವರ ಕಡೆಗೆ ತಿರುಗಿತೆಂಬದನ್ನು ತಕ್ಕ ಫಲದಿಂದ" ತೋರಿಸಿರಿ ಎಂದನು (ಮತ್ತಾಯ 3:8; ನೋಡಿ ಲೂಕ 3:8). ಅವನು ಅದನ್ನು ವಿವರಿಸಿ ಸ್ವಾರ್ಥಿಗಳು ಹಂಚಿರಿ (ಲೂಕ 3:11).[6] "ನೇಮಿಸಿದ ಅಸಲಿಗಿಂತಲೂ ಹೆಚ್ಚಾಗಿ ಎಳಕೊಳ್ಳಬೇಡಿರಿ" ಅಂದನು (ಲೂಕ 3:13). ಎಲ್ಲರೂ

......ಅಧಿಕಾರದ (ಲೂಕ 3:14), ಮಾನಸಾಂತರಕ್ಕೆ ಬನ್ನಿರಿ ಅಂದನು (ಮಾರ್ಕ 1:5). ಅವನು ಕೆಲವರನ್ನು "ಸರ್ಪಜಾತಿ ಯರೇ" ಅಂದನು (ಮತ್ತಾಯ 3:7). "ಅಂದರೆ ಹುಲ್ಲಿನಲ್ಲಿ ಅಡಗಿರುವ ಹಾವುಗಳೇ" ಎಂಬ ಅರ್ಥ.[7]

ಈ ಪ್ರಸಂಗ ನಿಮಿತ್ತ ಅನೇಕರು ಯೋಹಾನನಿಗೆ ಆಕರ್ಷಿತರಾದರು. "ಆಗ ಯುದಾಯ ಸೀಮೆಯೆಲ್ಲವೂ ಯೆರೂಸಲೇಮಿನವರೆಲ್ಲರೂ;[8] ಅವನ ಬಳಿಗೆ ಹೊರಟು ಹೋಗಿ ತಮ್ಮ ತಮ್ಮ ಪಾಪಗಳನ್ನು ಹೇಳಿಕೊಂಡು ಯೊರ್ದನ್ ಹೊಳೆಯಲ್ಲಿ ಅವನಿಂದ ದೀಕ್ಷಾಸ್ನಾನಮಾಡಿಸಿಕೊಳ್ಳು ತ್ತಿದ್ದರು"[9] (ಮಾರ್ಕ 1:5).

**ಯೋಹಾನನ ಕೃತ್ಯಗಳು**

ಅವನು ಸಂಶಯವಿಲ್ಲದ "ದೀಕ್ಷಾಸ್ನಾನ"ದ ಕುರಿತು ಕಾರ್ಯ ಮಾಡಿದನು. ಯೆಹೂದ್ಯರ ಶುದ್ಧತೆಯ ಸಂಗಡ ದೀಕ್ಷಾಸ್ನಾನವನ್ನು ಕೆಲವರು ಹೋಲಿಸುತ್ತಾರೆ, ಆದರೆ ಅದು ಪ್ರತ್ಯೇಕವಾದ ಕಾರ್ಯವಾಗಿದೆ.[10] "ದೀಕ್ಷಾಸ್ನಾನ" ನಿರ್ಧಿಷ್ಟವಾದದ್ದರಿಂದ, ಅವನು "ಸ್ನಾನಿಕ ವಾದ" ಯೋಹಾನನು ಎನ್ನಿಸಿಕೊಂಡನು (ಮತ್ತಾಯ 3:1).[11]

"ಸ್ನಾನಿಕ" ಎಂಬುದು ಗ್ರೀಕ್ ಪದವಾಗಿದೆ. ಅಂತ್ಯದಲ್ಲಿರುವ "ಟಿಸ್ಟ್" ಗ್ರೀಕ್ ಭಾಷೆಯ "ಬ್ಯಾಪ್ಟೆಜ್" ಎಂದಿರುತ್ತದೆ. ನಾಟಕಕಾರ ಅಥವಾ ವೈದ್ಯ ಎಂಬ ಅರ್ಥವಾಗಿದೆ. "ದೀಕ್ಷಸ್ನಾನ" ಮಾಡಿಸುವವನು.

ಅವನು ಯೋರ್ದನ್ ಹೊಳೆಯಲ್ಲಿ ದೀಕ್ಷಾಸ್ನಾನ ಮಾಡಿಸಿದನು. ಯೋರ್ದನನ ತೀರ ಪ್ರದೇಶದಲ್ಲೆಲ್ಲಾ ಅವನು ಪ್ರಸಂಗಮಾಡಿದನು. ಲೂಕ 3:3ರಲ್ಲಿ, "ಅವನು ಯೋರ್ದನ್ ಹೊಳೆಯ ಸುತ್ತಲಿರುವ ಪ್ರಾಂತದಲ್ಲೆಲ್ಲಾ ಸಂಚರಿಸಿ." ಎಂಬುದನ್ನು "ನಂತರ ಯೋಹಾನನ್ನು ಯೋರ್ದಾನಿನ ಎರಡೂ ಬದಿಗಳಲ್ಲಿ ಸಂಚರಿಸಿ, ಜನರಿಗೆ ದೀಕ್ಷಾಸ್ನಾನ ಮಾಡಿಸಿದನು" (ಯೋಹಾನ 1:28; 3:23) ಎನ್ನಲಾಗಿದೆ.

ಅವನು ಮುಳುಗಿಸುವ ದೀಕ್ಷಾಸ್ನಾನವನ್ನು ಮಾಡಿಸಿದನು. "ದೀಕ್ಷಾಸ್ನಾನ" ಎಂದರೆ ಮುಳುಗಿಸು ಎಂಬ ಅರ್ಥ.[12] ಗ್ರೀಕ್ ಪದದ ಅರ್ಥವನ್ನು ಅರಿಯದಿದ್ದರೂ, ಯೋಹಾನನು ಸ್ನಾನ ಮುಳುಗಿಸುವ ಸ್ನಾನವಾಗಿತ್ತು ಎಂದು ನಾವುಗಳು ಅರಿತ್ತಿದ್ದೇವೆ. ಯೋಹಾನ 3:23ರಲ್ಲಿ, "ಎನೋನೆಂಬ" ಸ್ಥಳದಲ್ಲಿ ಹೆಚ್ಚು ನೀರು ಇದ್ದದರಿಂದ, ಯೋಹಾನನು ಅಲ್ಲಿಯೂ ಸ್ನಾನ ಮಾಡಿಸುತ್ತಿದ್ದನು. ಚಿಮುಕಿಸುವ ಕಾರ್ಯಕ್ಕೆ ಹೆಚ್ಚಿನ ನೀರಿನ ಅಗತ್ಯವಿರುವದಿಲ್ಲ, ಆದರೆ ಮುಳುಗಿಸುವದಕ್ಕೆ ಹೆಚ್ಚಿನ ನೀರಿನ ಅತ್ಯವಿದೆ. ಯೇಸು ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡ ನಂತರ "ನೀರಿನಿಂದ ಮೇಲಕ್ಕೆ ಬಂದನು" ಎಂದು ಬರೆದದೆ (ಮಾರ್ಕ 1:10; ನೋಡಿ ಮತ್ತಾಯ 3:16). ಚಿಮುಕಿಸಿ ಮಾಡುವ ದೀಕ್ಷಾಸ್ನಾನದವರು, ಈ ದಿನ ಸ್ನಾನಿಕನಾದ ಯೋಹಾನನ ತತ್ವವನ್ನು ಉಲ್ಲಂಘನೆ ಮಾಡಿದ್ದಾರೆ.

"ಪಾಪ ಪರಿಹಾರಕ್ಕಾಗಿ ದೇವರ ಕಡೆಗೆ ತಿರುಗಿಕೊಳ್ಳಿರಿ" ಎಂಬುದು ಯೋಹಾನನ ದೀಕ್ಷಾಸ್ನಾನವಾಗಿತ್ತು (ಮಾರ್ಕ 1:4; ಲೂಕ 3:3). ಯಾಕಂದರೆ ಅದು ಪಾಪ ಪರಿಹಾರದ ಸಂಕೇತವಾಗಿದೆ.[13] ಯೋಹಾನನು ಜನರನ್ನು ಪಾಪದಿಂದ ತಿರುಗಿಸುವದು ಮಾತ್ರವಲ್ಲದೇ, ಪಾಪಪರಿಹಾರದ ಭರವಸೆಯನ್ನು ಸಹ ನೀಡಿದನು. ಅದು ಪಾಪ ಪರಿಹಾರದ ಯೇಸುವಿನ ಮರಣದ ಸಂಕೇತವು ಸಹ ಆಗಿತ್ತು.

**ಯೋಹಾನನ ಉದ್ದೇಶ**

ಜನರ ಹೃದಯಗಳನ್ನು ಮೆಸ್ಸಿಯನ ಆಗಮನಕ್ಕಾಗಿ ಸಿದ್ಧಮಾಡುವ ಉದ್ದೇಶವನ್ನು ಯೋ ಹಾನನು ಹೊಂದಿದ್ದನು (ನೋಡಿ ಯೋಹಾನ 3:28). ಅವನು ಜನರಿಗೆ, "ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲಾ"

ಅಂದನು (ಮತ್ತಾಯ 3:11; ನೋಡಿ ಯೋಹಾನ 1:27, 30). ಕೆರಗಳನ್ನು ಹೊರುವದು ಸೇವಕನ ಕೆಲಸವಾಗಿದ್ದಲಿಂದ, ಯೋಹಾನನು ನಾನು ಆತನ ದಾಸನಾಗುವದಕ್ಕೂ ಯೋಗ್ಯನು ಎಂದನು.

ಕ್ರಿಸ್ತನ ಮತ್ತು ಅವನ ನಡುವಿನ ಕಾರ್ಯಗಳ ವ್ಯತ್ಯಾಸವನ್ನು ಪ್ರಕಟಿಸಿ: "ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬದಕ್ಕೆ ನಿಮಗೆ ನೀರಿನಲ್ಲಿ ಸ್ನಾನಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ; ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನಮಾಡಿಸುವನು" (ಮತ್ತಾಯ 3:11; ನೋಡಿಲಿ 1:27, 30). ಪವಿತ್ರಾತ್ಮನ ಹಾಗೂ ಬೆಂಕಿಯ ದೀಕ್ಷಾಸ್ನಾನವು ವಿಭಿನ್ನವಾಗಿವೆ. ಯೋಹಾನನು ಮಿಶ್ರಿತ ಜನರೊಂದಿಗೆ ಮಾತಾಡುತ್ತಿದ್ದನು - ಅವರಲ್ಲಿ ಕೆಲವರು ಆಲಿಸಿದರು ಕೆಲವರು ನಿರಾಕರಿಸಿದರು (ಮತ್ತಾಯ 3:5-7).[14] ಮರಣ, ಹೂಣಿಡುವಿಕೆ, ಹಾಗೂ ಯೇಸುವಿನ ಪುನರುತ್ಥಾನದ ನಂತರ ಮೊದಲ ಪಂಚಾಶತ್ತಮ ದಿನದಂದು ಪವಿತ್ರಾತ್ಮನ ದೀಕ್ಷಾಸ್ನಾನವುಂಟಾಯಿತು (ಅಪೊಸ್ತಲರ ಕೃತ್ಯಗಳು 1:5, 8; 2:1-4). ಅವರು ಆತ್ಮನಿಂದ ಮುಳುಗಿಸಲ್ಪಟ್ಟರು ಬೆಂಕಿಯ ಸ್ನಾನ ಎಂದರೆ, ದೇವ ಭಕ್ತಿ ಇಲ್ಲದವರಿಗೆ ಉಂಟಾಗವ ನ್ಯಾಯತೀರ್ಪಾಗಿದೆ (ಮತ್ತಾಯ 3:12).

## ಮೆಸ್ಸೀಯನು ಸಹ ದೀಕ್ಷಾಸ್ನಾನ ಹೊಂದಿದನು (ಮತ್ತಾಯ 3:13-17 ಮಾರ್ಕ 1:9-11 ಲೂಕ 3:21, 22 ಯೋಹಾನ 1:31-34)

ಯೋಹಾನನು ಪ್ರಖ್ಯಾತಿಗೊಂಡಿದಾಗ - ಮೆಸ್ಸೀಯನ ನಿರೀಕ್ಷೆಯಲ್ಲಿರುವಾಗಲೇ ಯೇಸು ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಯೋಹಾನನ ಬಳಿಗೆ ಬಂದನು. ಆ ಸಮಯದಲ್ಲಿ ಯೇಸು "ಮೂವತ್ತು ವರ್ಷದವನಾಗಿದ್ದನು" (ಲೂಕ 3:23).

ಈ ಹಿಂದೆ ಯೋಹಾನನು ಯೇಸುವನ್ನು ಸಂಧಿಸಿರುವ ಬಗ್ಗೆ ಮಾಹಿತಿ ಇರುವದಿಲ್ಲ ಆದರೆ ಅವರ ತಾಯಿಯರು ಸ್ನೇಹಿತರು ಮತ್ತು ಸಂಬಂಧಿಗಳು ಆಗಿದ್ದನು.[15] ಒಂದು ವೇಳೆ ಯೆರೂಸಲೇಮಿನ ಉತ್ಸವದಲ್ಲಿ ಯೇಸು ಮತ್ತು ಯೋಹಾನರು ಒಟ್ಟಿಗೆ ಸೇರಿರಬಹುದು. ಪಲಿಚಯವಿಲ್ಲದಿದ್ದರೂ, ದೀಕ್ಷಾಸ್ನಾನ ಹೊಂದುವವರ ಸಂಗಡ, ಯೇಸು ಸಹ ಕಾದುಕೊಂಡಿದ್ದನು. ಯೋಹನನು ಮಾನಸಾಂತರದ ದೀಕ್ಷಾಸ್ನಾನ ಮಾಡಿಸುತ್ತಿದ್ದನು, ಆದರೆ ಯೇಸುವಿಗೆ ಯಾವ ಕ್ಷಮಾಪಣೆಯ ಅಗತ್ಯವಿರುವದಿಲ್ಲ. ಮೊಲಿಗೆ ಯೋಹಾನನು ಯೇಸುವಿಗೆ ಸ್ನಾನ ನೀಡಲು ನಿರಾಕರಿಸಿದರೂ: "ನಾನು ನಿನ್ನಿಂದ ಸ್ನಾನ ಮಾಡಿಸಿಕೊಳ್ಳ ತಕ್ಕವನಾಗಿರುವದಲಿಂದ, ನೀನು ನನ್ನ ಬಳಿಗೆ ಬರುವದೇನು?" ಎಂದನು (ಮತ್ತಾಯ 3:14).

ನಮ್ಮ ಹಾಗೆ ಯೇಸು ಪಾಪವುಳ್ಳವನಾಗಿರಲಿಲ್ಲ, ಆದಾಗ್ಯೂ ಏಕೆ ದೀಕ್ಷಾಸ್ನಾನ ಮಾಡಿಸಿಕೊಂಡನು? ಯೇಸು ತಾನೇ ಅದರೆ ಉತ್ತರ ನೀಡುವನು ಸತ್ಯಕ್ಕೆ ಒಪ್ಪಿಕೋ: "ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ"[16] ಅಂದನು (ಮತ್ತಾಯ 3:15). ಯೋಹಾನನ ದೀಕ್ಷಾಸ್ನಾನವು ಪರಲೋಕದಿಂದ ಬಂತು (ನೋಡಿ ಮತ್ತಾಯ 21:25), ಯೋಹಾನನ ಸ್ನಾನವನ್ನು ನಿರಾಕರಿಸಿದವರು "ದೇವರ ಸಂಕಲ್ಪವನ್ನು ನಿರಾಕರಿಸಿದ್ದಾರೆ" (ಲೂಕ 7:30). ಆದ್ದರಿಂದ ಯೇಸು ದೇವರ ಚಿತ್ತದ ಕುರಿತು ಮಾತಾಡಿರುವನು[17] - ಯೋಹಾನನ ಸ್ನಾನವು ದೇವರ ಚಿತ್ತದ ಒಂದು ಭಾಗವಾಗಿತ್ತು. ಆದ್ದರಿಂದ ದೀಕ್ಷಾಸ್ನಾನದ ಕುರಿತು ಯಾವುದೇ ಪ್ರಶ್ನೆಯ ಯೇಸುವಿನಲ್ಲಿ ಉಂಟಾಗಲಿಲ್ಲ. ದೀಕ್ಷಾಸ್ನಾನದ ಕುರಿತು ಎಲ್ಲರು ಈ ಭಾವನೆ ಹೊಂದಿದರೆ, ಅದು ಅದ್ಭುತವಲ್ಲವೇ?

ಅಂತಿಮವಾಗಿ ಯೋಹಾನನು ಯೇಸುವಿಗೆ ಸ್ನಾನ ಮಾಡಿಸಲು ಒಪ್ಪಿಕೊಂಡನು.

ದೀಕ್ಷಾಸ್ನಾನ ಹೊಂದುವಾಗ ಯೇಸು ಪ್ರಾರ್ಥಿಸುತ್ತಿದ್ದನು (ಲೂಕ 3:21).[18] ಆಗ ಯೋಹಾನನು ಒಂದು ಸಂಗತಿಯನ್ನು ನೋಡಿದನು ಹಾಗೂ ಆಲಿಸಿದನು:

> ಯೇಸು ಸ್ನಾನಮಾಡಿಸಿಕೊಂಡ ಕೂಡಲೆ ನೀರಿನಿಂದ ಮೇಲಕ್ಕೆ ಬರಲು ಇಗೋ, ಆತನಿಗೆ ಆಕಾಶವು ತೆರೆಯಿ; ಮತ್ತು ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವದನ್ನು ಕಂಡನು.[19] ಆಗ ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು (ಮತ್ತಾಯ 3:16, 17).[20]

ಈ ರೀತಿಯಾಗಿ ದೇವರು ಯೇಸುವಿನ ಮೂವತ್ತು (ಹೆಚ್ಚಿನ) ವರ್ಷಗಳ ಜೀವಿವನ್ನು ಒಪ್ಪಿಕೊಂಡನು, ಆತನನ್ನು ಸೇವೆಗೆ ಸಿದ್ಧ ಪಡಿಸಿದನು (ನೋಡಿರಿ ಲೂಕ 4:18; ಅಪೊಸ್ತಲರ ಕೃತ್ಯಗಳ 10:38).

ಈ ಘಟನೆ ಸಂಭವಿಸುವ ಮೊದಲು, ಯೇಸುವೇ ಆ ಮೆಸ್ಸೀಯನಿರಬಹುದು ಎಂದು ಯೋಹಾನನು ತಿಳಿದಿದ್ದನು, ಆದರೆ ಅದರ ಸ್ಪಷ್ಟತೆ ಅವನಿಗಿರಲಿಲ್ಲ. ಆತನನ್ನು ಅರಿಯುವ ಸೂಚನೆಯನ್ನು ದೇವರು ತಿಳಿಸಿದ್ದನು: "ಯಾವನ ಮೇಲೆ ಆತ್ಮವು ಇಳಿದು ಬಂದು ಇರುವದನ್ನು ನೀನು ನೋಡುತ್ತೀಯೋ; ಆತನೇ ಮೆಸ್ಸೀಯನು" (ಯೋಹಾನ 1:33). ಪರಲೋಕದಿಂದ ಆತ್ಮನು ಇಳಿದು ಬಂದದ್ದನ್ನು ಯೋಹಾನನು ಗಮನಿಸಿ ಆಶ್ಚರ್ಯಪಟ್ಟಿರಬಹುದು. ಹೌದು ಕ್ರಿಸ್ತನು ಬಂದನು, ಹಾಗೂ ದೇವರ ವಾಕ್ಯ ಸತ್ಯವಾಯಿತು!

## ಮೆಸ್ಸೀಯನ ಪರಿಶೋಧನೆ
## (ಮತ್ತಾಯ 4:1-11 ಮಾರ್ಕ 1:12, 13 ಲೂಕ 4:1-13)

ಆತನು ದೀಕ್ಷಾಸ್ನಾನ ಹೊಂದಿದ ಮರುಗಳಿಗೆಯಲ್ಲಿಯೇ, ಆತನಿಗೆ ಪರಿಶೋಧನೆ ಉಂಟಾಯಿತು. ದೀಕ್ಷಾಸ್ನಾನ ಹೊಂದುವದರಿಂದ, ಶೋಧನೆ ಉಂಟಾಗುವದಿಲ್ಲ ಎಂಬ ಅರ್ಥವಲ್ಲ. ದೀಕ್ಷಾಸ್ನಾನದ ನಂತರ ಸೈತಾನನು ಶೋಧನೆಯನ್ನು ಕಡಿಮೆ ಮಾಡುವದಿಲ್ಲ ಆದರೆ ಅದು ದ್ವಿಗುಣಗೊಳ್ಳುತ್ತದೆ. ದೀಕ್ಷಾಸ್ನಾನ ಹೊಂದಿರುವದರಿಂದ, ಶೋಧನೆಗಳನ್ನು ಜಯಿಸಲು ದೇವರು ಹೆಚ್ಚಿನ ಬಲವನ್ನು ನೀಡುತ್ತಾನೆ (1 ಕೊರಿಂಥ 10:13; ಇಬ್ರಿಯ 13:5).

ಶೋಧನೆಯ ಕುರಿತಾದ ಮಾತೇನಂದರೆ: "ಆಗ ಯೇಸು ಸೈತಾನನಿಂದ *ಆತ್ಮವನ್ನು* ಶೋಧಿಸಲ್ಪಡುವದಕ್ಕಾಗಿ ಆತನು ಆತನನ್ನು ಅಡವಿಗೆ ಬಯ್ದನು" (ಮತ್ತಾಯ 4:1; ಲೂಕ ನೋಡಿರಿ 4:1; ಒತ್ತಿ ಹೇಳಿದ್ದು ನನ್ನದು). ಈ ರೀತಿಯಾಗಿ ದೇವರ ಚಿತ್ತವು ನೆರವೇರಬೇಕಿತ್ತು.

ಇದರಲ್ಲಿ ದೇವರ ಉದ್ದೇಶವೇನೆಂದು ಅರ್ಥವಾಗದಿದ್ದರೂ, "ಶೋಧನ" ಎಂಬ ಪದದಲ್ಲಿ ಒಂದು ಗೂಡಾರ್ಥವು ಅಡಗಿದೆ. "ಶೋಧನೆ" ಎಂಬ ಗ್ರೀಕ್ ಪದ ಅರ್ಥ "ಪರೀಕ್ಷೆ" ಎಂದಿರುತ್ತದೆ. ಯೇಸು ಅರಣ್ಯದಲ್ಲಿ ಪ್ರವಾಸಿಯಾಗಿದ್ದಾಗ "ಪರೀಕ್ಷೆಗೊಳ ಗಾದನು" ಸೈತಾನನು ಆತನನ್ನು ಪಾಪಕ್ಕೆ ನಿಲುಕಿಸಲು ಯತ್ನಿಸಿದನು (ದೇವರ ಉದ್ದೇಶವನ್ನು ನಿರರ್ಥಕ ಮಾಡುವ ಯತ್ನ). ಯೇಸುವಿನ ಅಡವಿಯಲ್ಲಿನ ನಾಲ್ವತ್ತು ದಿವಸಗಳ ಕಾಲದ ಶೋಧನೆಯಿಂದ, ಯೇಸು ಪರಿಪಕ್ವವಾದನು. ಇದು ದೇವರ ಉದ್ದೇಶವಾಗಿತ್ತು.[21]

ಇಲ್ಲಿ ಮೂರು ವಿಧವಾದ ಶೋಧನೆಗಳಿವೆ.[22] ಅವುಗಳು 1 ಯೋಹಾನ 2:16ಕ್ಕೆ ಸಮಾನವಾಗಿವೆ: "ದೇಹದ ಆಶೆ [ಕಲ್ಲನ್ನು ರೊಟ್ಟಿ ಮಾಡುವದು] ಕಣ್ಣಿನ ಆಶೆ [ಪ್ರಪಂಚದ ಮಹಿಮೆ] ಬದಕು ಬಾಳಿನ ಡಂಬ [ಜನರ ಮೆಚ್ಚುಗೆ]."

ಇದನ್ನು ಕುರಿತು ಇಬ್ರಿಯ ಬರಹಗಾರನು, "ಆತನು ಸರ್ವವಿಷಯಗಳಲ್ಲಿ ನಮ್ಮ ಹಾಗೆ

ಶೋಧನೆಗೆ ಗುರಿಯಾದನು" ಎಂದು ಬರೆದಿರುವನು (ಇಬ್ರಿಯ 4:15ಎ). ನಮ್ಮ ಹಾಗೆ ಆತನು ಸಾವಿರಾರು ಶೋಧನೆಗಳಿಗೆ ಗುರಿಯಾಗಲಿಲ್ಲ, ಆದರೆ ನಾವು ಅನುಭವಿಸುವ ಶೋಧನೆಗಳ ವಿಧಗಳನ್ನು ಅನುಭವಿಸಿದನು, ಇದರ ಕುರಿತು ಮತ್ತಾಯ 4ಹಾಗು ಲುಕ 4ರಲ್ಲಿ ವಿಶ್ಲೇಷಣೆ ನೀಡಲಾಗಿದೆ,

ಯೇಸುವಿನ ಶೋಧನೆಯ ಬಗ್ಗೆ ಕೆಲವರಲ್ಲಿ ಸಂಶಯವಿದೆ, ಅದು ಪಾಪಕ್ಕೆ ಸಂಬಂಧ ಪಟ್ಟಿರುವದರಿಂದ, ಕೆಲವರಿಗೆ ಅರ್ಥವಾಗದು, ಮನುಷ್ಯನು ಪಾಪ ಮಾಡಲು ಮನಸ್ಸು ಮಾಡುವವರೆಗೆ ಶೋಧನೆಯು ಉಂಟಾಗುವದಿಲ್ಲ ಆದ್ದರಿಂದ ಯೇಸು ಪಾಪ ಮಾಡಿರಬಹುದು ಎಂದು ಕೆಲವರು ಶಂಕಿಸುತಾರೆ.

ಈ ಶೋಧನೆಯ ಬಗ್ಗೆ ಅರ್ಥವಾಗಲಾರದೆ ಅನೇಕ ಸಂಗತಿಗಳು ಇವೆ; ಹೌದು ಯೇಸು ಒಂದೇ ಬಾರಿಗೆ ದೇವರು ಹಾಗು ಮನುಷ್ಯನು ಆಗಿರುವ ಸಾದ್ಯತೆಯಲ್ಲಿ ಪ್ರಶ್ನೆಯಾಗುತ್ತೇದೆ[23] ಆದರೆ ಈ ಕೆಳಗಿನ ಮೂರು ನಿರ್ಣಯಗಳ ಭರವಸೆ ಮೂಡಿಸುತ್ತವೆ: (1) ಹೌದು ಯೇಸು ಶೋಧನೆಗೆ ಒಳಗಾದನು, ಇಲ್ಲದೆ ಹೋದರೆ ಶೋಧನೆಯ ಈ ವಿಚಾರವು ಉದ್ಭವಿಸುತ್ತಿರಲಿಲ್ಲ, ಈ ವಿಚಾರ ಜ್ಞಾನಕ್ಕೆ ನಿಲುಕದಿದ್ದರೂ, ಯೇಸು ಶೋಧನೆಗೆ ಒಳಗಾದದ್ದು ಸತ್ಯವಾಗಿದೆ, (2) ಶೋಧನೆಗೆ ಒಳಗಾದ ಸಂಗತಿಯು ಪಾಪವಾಗುತ್ತದೆ. (3) ಯೇಸು ಶೋಧನೆಯನ್ನು ನೆರವೇರಿಸಲಿಲ್ಲ "ಅತನು ಶೋಧನೆಗೆ ಗುರಿಯಾದರೂ, *ಪಾಪ ಮಾತ್ರ ಮಾಡಲಿಲ್ಲ*" (ಇಬ್ರಿಯ 4:15; ಒತ್ತಿ ಹೇಳಿದ್ದು ನನ್ನದು).[24] ದೇವರಿಗೆ ಸ್ತೋತ್ರವಾಗಲಿ, ಒಂದು ವೇಳೆ ಅತನು ಪಾಪ ಮಾಡಿದ್ದರೆ, "ಕ್ರೂಜಿಯ ಮೇಲೆ ಆತನು ನಮ್ಮ ಪಾಪಗಳನ್ನು ನಿವಾರಣೆ ಮಾಡಲು ಸಾಧ್ಯವಾಗುತ್ತಿರಲಿಲ್ಲ ಮತ್ತು ನಾವುಗಳು ನೀತಿವಂತರಾಗುತ್ತಿರಲಿಲ್ಲ" (2 ಕೊರಿಂಥ 5:21)!

ಶೋಧನೆಗೆ ಒಳಗಾದ ನಂತರ, "ದೇವದೂತರು ಒಂದು ಆತನಿಗೆ ಉಪಚಾರ ಮಾಡಿದನು" (ಮತ್ತಾಯ 4:11). ನಮಗೆ ಶೋಧನೆಗಳು ಉಂಟಾಗುವಾಗ ದೇವರು ನಮ್ಮಿಂದ ದೂರವಾಗುವದಿಲ್ಲ.

## ಮೇಸ್ಸಿಯನು ಎಂಬ ಪ್ರಕಟನೆ (ಯೋಹಾನ 1:19-34)

ಶೋಧನೆಯ ನಂತರ, ಯೋಸು ಯೋಹಾನನು ಪ್ರಸಂಗ ಮಾಡುತ್ತಿದ್ದ ಸ್ಥಳಕ್ಕೆ ಹಿಂದಿರುಗಿದನು, (ವಚನಗಳು 26, 29),

### ನಿರಾಕರಣೆ

ಯೋಹಾನನ ಪ್ರಸಂಗದಿಂದ ಯೆರೂಸಲೇಮಿನ ಧಾರ್ಮಿಕ ನಾಯಕರುಗಳಿಗೆ ಅಡಚಣೆ ಉಂಟಾಯಿತು. ಆದ್ದರಿಂದ ಫರಿಸಾಯರು (ಯೋಹಾನ 1:24). ಅವನನ್ನು ಪ್ರಶ್ನಿಸಲು ಯಾಜಕರನ್ನು ಹಾಗೂ ಲೇವಿಯರನ್ನು ಅವನ ಬಳಿಗೆ ಕಳುಹಿಸಿದರು. ಅವನು ಎಲಿಯನೋ, ಮೆಸ್ಸೀಯನೋ (ಕ್ರಿಸ್ತನು),[25] ಅಥವಾ ಪ್ರವಾದಿಯೇ ಎಂಬ ಮಾಹಿತಿಯನ್ನು ಪಡೆಯಲು ಅವರನ್ನು ಕಳುಹಿಸಿದರು. ಯೋಹಾನನು ಅವರಿಗೆ "ಇಲ್ಲ"ವೆಂದು ಹೇಳಿದನು (ಯೋಹಾನ 1:19-21).

ಕ್ರಿಸ್ತನು ಮತ್ತು ಪ್ರವಾದಿಯೆಂಬ ಹೇಳಿಕೆಯಿಂದ ಧಾರ್ಮಿಕ ನಾಯಕರುಗಳಿಗೆ ಗೊಂದಲ ಉಂಟಾಯಿತು. ಮೆಸ್ಸೀಯನ ಕುರಿತಾದ ಕೆಲವು ಪ್ರವಾದನೆಗಳು, ಅವರ ಆಲೋಚನೆಯಂತೆ ಇರಲಿಲ್ಲ, ಅದ್ದರಿಂದ, ಆ ಪ್ರವಾದಿಯ ಕುರಿತು, ಮೋಶೆಯ ಧರ್ಮಶಾಸ್ತ್ರವನ್ನು ಪರಿಶೀಲಿಸಿದರು (ಧರ್ಮೋಪದೇಶಕಾಂಡ 18:15). ಮುಂದೆ ಬರಲಿದ್ದ ಮೆಸ್ಸಿಯನ ಕುರಿತು ಮೋಶೆ ತಿಳಿಸಿದ್ದನು,[26] ಆದರೆ ಬೇರೆ ವಿಧವಾದ "ಪ್ರವಾದಿಯ" ಕುರಿತು ಯೆಹೂದ್ಯ ಬೋಧಕರು ಭಾವಿಸಿಕೊಂಡಿದ್ದರು.

ಯೋಹಾನನು ತಾನು ಎಲಿಯನಲ್ಲವೆಂದು ಹೇಳಿದ ವಿಚಾರ ಆಶ್ಚರ್ಯವಾಗಬಹುದು

(ಯೋಹಾನ 1:21). ಯೆಶಾಯ 40:3 ಪ್ರಕಾರ ತಾನು ಮೆಸ್ಸೀಯನ ಮುಂದಾಗಿ ಹೋಗಿ ಸಿದ್ಧಮಾಡುವವನು ಎಂದು ಉತ್ತರಿಸಿದನು. ಯೆಶಾಯ 40:3 ಹಾಗೂ ಮಲಾಕಿ 3:1 (ಮಾರ್ಕ 1:2, 3[27]), ಮೆಸ್ಸೀಯನ ಮುಂದಾಗಿ ಬರುವವನ ವಿಚಾರವನ್ನು ತಿಳಿಸುತ್ತದೆ, ಮಲಾಕಿಯು ಅವನನ್ನು "ಪ್ರವಾದಿಯಾದ ಎಲೀಯನು" ಎಂದಿರುವದರಿಂದ (ಮಲಾಕಿ 4:5). ಆದ್ದರಿಂದ ಮಲಾಕಿಯನ ಪ್ರಕಾರ, ಆ ಎಲೀಯನು "ಯೋಹಾನನೇ ಅದು ಸತ್ಯವೆಂದು ಯೇಸು ಸಹ ದೃಡಪಡಿಸಿದ್ದನು" (ಮತ್ತಾಯ 11:14; ನೋಡಿರಿ 17:10-13).

ಹಾಗದರೆ ಯೋಹಾನನು ಎಲೀಯನಲ್ಲವೆಂದು ಏಕೆ ಹೇಳಿದನು? ಎಲೀಯನು ಮತ್ತೇ ಬರುವುದನ್ನು ನಂಬುತ್ತಿದ್ದರು.[28] ಶಾರೀರಕವಾಗಿದ್ದ ಎಲೀಯನು ಅಲ್ಲವೆಂದು ಯೋಹಾನನು ಒಪ್ಪಿಕೊಂಡನು. ಆತನು "ಎಲೀಯನ *ಗುಣಾಶಕ್ತಿಗಳಿಂದ* ಉಳಿದವನಾಗಿ ಬಂದನೆಂದನು" (ಲೂಕ 1:17 ಒತ್ತಿ ಹೇಳಿದ್ದು ನನ್ನದು), ಆದರೆ ಅಕ್ಷರಾಶಃದಾಗಿ ಆತನು ಎಲೀಯನಲ್ಲ.

### ದೃಢಪಡಿಸಿದ್ದು

ಯೆರೂಸಲೇಮಿನ ಮಂಡಲಿಯವರಿಗೆ ಯೋಹಾನನು ತನ್ನ ಕುರಿತು ತಿಳಿಸಿದ ನಂತರ, ಯೇಸುವನ್ನು "ಮೆಸ್ಸೀಯನೆಂದು" ದೃಢಪಡಿಸುವ ಅವಕಾಶವನ್ನು ಪಡೆದನು. ಆತನು ಯೇಸು ಬರುವದನ್ನು ಕಂಡು "... ಅಗೋ [ಯಜ್ಞಕ್ಕೆ] ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು ಅಂದನು!" (ಯೋಹಾನ 1:29).

ಯೋಹಾನನು ಯೇಸುವನ್ನು ಜಯಗೊಳಿಸುವ ಸೈನ್ಯಾಧಿಕಾರಿಯನ್ನಾಗಿ ಪರಿಚಯಿಸಲಿಲ್ಲ, ಲೋಕದ ಪಾಪವನ್ನು ನಿವಾರಣೆ ಮಾಡುವ ದೇವ ಕುರಿಮರಿ ಎಂದು ಪರಿಚಯಿಸಿದನು (ನೋಡಿರಿ ಲೂಕ 19:10). ಕುರಿಮರಿಗಳು ಎಂದು ಹೇಳಿರುವದಿಲ್ಲ. ಪಾಪವನ್ನು ವೇದಿಯ ಮೇಲೆ ನಿವಾರಣೆ ಮಾಡುವ ಸಂಕೇತ. ಯೇಸು ನಮ್ಮ ಪಸ್ಕದ ಕುರಿಯಾಗಿರುವನು (1 ಕೊರಿಂಥ 5:7), ನಿಷ್ಕಳಂಕವಾದ ಕುರಿಮರಿ (1 ಪೇತ್ರ 1:19).

ತನಗಿದ್ದ ಯೇಸುವಿನ ಪರಿಚಯದ ಕುರಿತು ಯೋಹಾನನು ತಿಳಿಸಿದನು (ಯೋಹಾನ 1:31-33). "ನಾನು ಅದನ್ನು ನೋಡಿ ಈತನೇ ದೇವಕುಮಾರನೆಂದು ಸಾಕ್ಷಿ ಕೊಟ್ಟಿದ್ದೇನೆ ಅಂದನು" (ಯೋಹಾನ 1:34).

ಇನ್ನು ಕೆಲವು ಕಾಲ ಯೋಹಾನನು, ಬೋಧಿಸಿ, ಜನರಿಗೆ ಸ್ನಾನ ಮಾಡಿಸುವಲ್ಲಿ ಮುಂದುವರೆದರೂ, ದೇವರ ಕಾರ್ಯದ ಉದ್ದೇಶವನ್ನು ಈಡೇರಿಸಿದನು.[29] ಯಾವ ಮನುಷ್ಯನು ಮಾಡಲಾರದ, ಕಾರ್ಯವನ್ನು ಯೋಹಾನನು ಮಾಡಿ ಮುಗಿಸಿದನು.

## ಮುಕ್ತಾಯ

ಯೇಸು ಕಾರ್ಯ ಪ್ರಾರಂಭ ಮಾಡುವಂತೆ ಸಕಲ ಸಿದ್ಧತೆಗಳು ಆಗಿದ್ದವು. ಸಕಲಕ್ಕೂ "ಪ್ರಥಮ ಸಮಯ ಎಂಬ ಪಾಠದಲ್ಲಿ" ಯೇಸುವಿನ ಆರಂಭದ ಸೇವೆಯ ಕುರಿತು ನೋಡೋಣ.

ಸಿದ್ಧತೆಯ ಆರಂಭದಲ್ಲಿ, ದೀಕ್ಷಾಸ್ನಾನವು ಪ್ರಮುಖ ಅಂಶವಾಗಿತ್ತು. ನೀನು ದೇವರ ಸೇವೆ ಮಾಡಬೇಕೆಂದಿದ್ದರೆ, ಆತನು ಮಗುವಾಗಿ, ನಂಬಿಕೆಯಿಂದ ದೀಕ್ಷಾಸ್ನಾನ ಹೊಂದುವದು ಪ್ರಮುಖವಾಗಿದ (ಗಲಾತ್ಯ 3:26, 27). ಎಪ್ಪತ್ತರಿಂದ, ಎಂಬತ್ತು ಮೈಲುಗಳ ಅಂತರವನ್ನು ಕ್ರಮಿಸಿ, ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡನು.[30] ನೀನು ಸಹ ನಡೆದು, ಓಡಿ, ದೀಕ್ಷಾಸ್ನಾನಕ್ಕೆ ಆತರ ಪಡುವಿ ಎಂದು ನಾನು ಆಶಿಸುತ್ತೇನೆ![31]

ಟಿಪ್ಪಣಿಗಳು

[1]ಅರ್ಥಕ್ಕೆ ಬೇಕಾದ ಚರ್ಚೆಗೆ "ಪರಲೋಕ ರಾಜ್ಯ" ಎಂಬ ಪಾಠವನ್ನು ನೋಡಿ. [2]ಯೋಹಾನನ ಕೆಲಸವನ್ನು ಕಡಿಮೆಯ (ಅಥವಾ ಕೀಳು) ಭಾವದಿಂದ ನೋಡಬಾರದು "ಸುವಾರ್ತೆ ಪ್ರಾರಂಭ" ಎಂದು ಮಾರ್ಕನು ಕರೆದರು (ಮಾರ್ಕ 1:1). ಯೋಹಾನನ ದೀಕ್ಷಸ್ನಾನ ಮೊದಲಗೊಂಡ ಪದ್ಧತಿ ಪ್ರಕಾರ ಸುವಾರ್ತೆ ಪ್ರಾರಂಭವಾಯಿತೆಂದು (ಅಪೊಸ್ತಲರ ಕೃತ್ಯಗಳು 1:21, 22; ನೋಡಿ 10:37, 38) ಕಾರ್ಯಗ್ರಂಥದಲ್ಲಿ ಇದೆ. [3]ಸ್ನಾನಿಕನಾದ ಯೋಹಾನನ್ನು ಕುರಿತು ವಿವರಗಳಿಗೆ "ಕ್ರಿಸ್ತನು ಬರುತ್ತಿದ್ದಾನೆ" ಎಂಬ ಪಾಠದಲ್ಲಿ ಚರ್ಚಿಸಲಾಗಿದೆ. [4]ಐದು ಜನ ರಾಜಕೀಯ ನಾಯಕರ ಹಿಂದಿನ ಚರಿತ್ರೆಯನ್ನು "ಕ್ರಿಸ್ತನು ಅವತರಿಸಿದ ಲೋಕ" ಎಂಬ ಪಾಠವನ್ನು ನೋಡಿ. [5]ಇಬ್ಬರು ಮತನಾಯಕರ ವಿವರಗಳಿಗೆ "ಕ್ರಿಸ್ತನು ಅವತರಿಸಿದ ಲೋಕ" ಎಂಬ ಪಾಠದಲ್ಲಿ ನೋಡಿ. [6]ಅಭ್ಯಾಸಕ್ಕೆ ಸಂಬಂಧವಾದ ಭಾಗವಿದು. ನೀನು ಇದನ್ನು ವಿಸ್ತರಿಸಬಹುದು. [7]ಇದು ಅಮೇರಿಕೆಯ ಹೇಳಿಕೆ. ನಿನ್ನ ಸುತ್ತಮುತ್ತಲಿನ ಭಾಷಾ ಪ್ರಯೋಗವನ್ನು ಉಪಯೋಗಿಸು. [8]ಈ ಪ್ರತಿಪಾದನೆಯಲ್ಲಿ "ಎಲ್ಲಾ" ಎಂದು ಎರಡು ಸಾರಿ ಉಪಯೋಗಿಸಿರುವುದು ಅಧಿಕ ಸಂಖ್ಯೆಯನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿದೆ. [9]ಯೋಹಾನನ ದೀಕ್ಷಾಸ್ನಾನ ಮತ್ತು ಹೊಸ ಒಡಂಬಡಿಕೆಯ ದೀಕ್ಷಾಸ್ನಾನಕ್ಕೂ ವ್ಯತ್ಯಾಸಗಳನ್ನು ನೋಡ ಬಹುದು (ಮತ್ತಾಯ 28:18-20; ಮಾರ್ಕ 16:15, 16). ಅದರಲ್ಲಿ ಒಂದು ಯೋಹಾನನ ದೀಕ್ಷಾಸ್ನಾನ ಅವರು ತಮ್ಮ ಪಾಪಗಳನ್ನು ಒಪ್ಪಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಂಡರು. ಹೊಸ ಒಡಂಬಡಿಕೆಯಲ್ಲಿ ಯೇಸುವಿನಲ್ಲಿ ತಮ್ಮ ವಿಶ್ವಾಸವನ್ನು ಒಪ್ಪಿಕೊಂಡು (ಅಪೊಸ್ತಲರ ಕೃತ್ಯಗಳು 8:35-38; ರೋಮಾಪುರ 10:9, 10). ದೀಕ್ಷಾಸ್ನಾನ ಮಾಡಿಸಿಕೊಂಡರು. [10]ದೀಕ್ಷಾಸ್ನಾನ ಮತ್ತು ಶುದ್ಧಿಕರಣದ ನಡುವೆ ಉದ್ದೇಶ ದಲ್ಲಿ ಮತ್ತು ಅದನ್ನು ಆಚರಿಸುವ ಪದ್ಧತಿಯಲ್ಲಿ ಅನೇಕ ವ್ಯತ್ಯಾಸಗಳಿವೆ.

[11]ಇತರರು ಸಹ ಇದೇ ವಿಧವಾದ ಸ್ನಾನವನ್ನು ಮಾಡಿಸುತ್ತಿದ್ದರೆ. ಯೋಹಾನನು ತನ್ನದನ್ನು "ದೀಕ್ಷಾಸ್ನಾನ" ಎಂದು ಸಂಬೋಧಿಸುತ್ತಿರಲಿಲ್ಲ. [12]*The Analytical Greek Lexicon* (London: Samuel Bagster & Sons Ltd., 1971), 65. [13]ಹೊಸ ಒಡಂಬಡಿಕೆಯ ದೀಕ್ಷಾಸ್ನಾನ "ನಂಬಿಕೆಯ ಸ್ನಾನ" ಎಂದು ಕರೆಯಬಹುದು. ಯಾಕೆಂದರೆ ಅದು ನಮ್ಮ ವಿಶ್ವಾಸವನ್ನು ತೋರಿ ಸುವಂತದ್ದಾಗಿದೆ. [14]ಅಂಗಿಕರಿಸದವರ ಕುರಿತು ಮಾರ್ಕನು ಮಾತನಾಡಿಲ್ಲವಾದ್ದರಿಂದ, ಕೇವಲ ಪರಿಶುದ್ಧಾತ್ಮ ದೀಕ್ಷಾಸ್ನಾನ ಕುರಿತು ಮಾತ್ರವೇ ಹೇಳಿದನು (ಮಾರ್ಕ 1:8). ಯೋಹಾನನು ಸಹ ಪರಿಶುದ್ಧಾತ್ಮನ ದೀಕ್ಷಾಸ್ನಾನ ಕುರಿತು ಹೇಳಿದನು (ಯೋಹಾನ 1:33), ಆದರೆ ಮತ್ತಾಯನ ಹಾಗೆಯೇ ಲೂಕನು ಮಿಶ್ರವಾದ ಕೇಳುಗರನ್ನು ಚಿತ್ರಿಸಿದ್ದಾನೆ (ಲೂಕ 3:7). ಆದುದರಿಂದ ಪರಿಶುದ್ಧತ್ಮಾನಿಂದಲೂ ಅಗ್ನಿಯಿಂದಲೂ ದೀಕ್ಷಾಸ್ನಾನ ಕೊಡುವನೆಂದು ಬರೆದರು (ಲೂಕ 3:16). [15]ಮರಿಯಳು ಹಾಗೂ ಎಲಿಜಬೇತಳ ಕುರಿತ ಚರ್ಚೆಯನ್ನು ಈ ಪುಸ್ತಕದಲ್ಲಿ ನೋಡಿ. [16]ದೇವರ ಅಪ್ಪಣೆಗಳೆಲ್ಲವೂ ನೀತಿಯಿಂದ ಕೂಡಿವೆ ಎಂದು ಕೀರ್ತನೆಗಳ ರಚನೆಕಾರನು ಹೇಳಿ ದ್ದಾರೆ (ಕೀರ್ತನೆ 119:172). [17]ಈ ಸತ್ಯವು "ಯೇಸುವಿನ ಶೋಧನೆ" ಎಂಬ ಪಾಠದಲ್ಲಿ ಒತ್ತಿ ಹೇಳಲಾಗಿದೆ. [18]ತನ್ನ ಜೀವಿತದ ಪ್ರಮುಖ ಸಂಘಟನೆಗಳಲ್ಲಿ ಯೇಸು ಪ್ರಾರ್ಥಿಸಿದ್ದನು ಎಂದು ಲೂಕನು ಹೇಳಿದ್ದಾನೆ (ನೋಡಿ 6:12, 13; 9:28, 29; 22:44, 45; 23:33, 34, 46). [19]ಪವಿತ್ರಾತ್ಮನು ಪಾರಿವಾಳ ಎಂದು ದೈವ ಪ್ರೇರಿತವಾದ ಲೇಖಕನು ಹೇಳಲಿಲ್ಲ. ಆದರೆ ಆತನು ಪಾರಿವಾಳದ ಹಾಗೆ ಇಳಿದು ಬಂದವನೆಂದು ಹೇಳದ್ದಾನೆ. [20]ದೈವತ್ವವು ಮೂವರ ವ್ಯಕ್ತಿಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದ್ದಾರೆ, ಮೂರು ಪ್ರತ್ಯೇಕವಾದ ಸ್ಥಳದಲ್ಲಿ ಇರುವಂತೆ, ಒಬ್ಬೊಬ್ಬರು ಒಂದೊಂದು ವ್ಯತ್ಯಾಸವಾದದ್ದನ್ನು ಮಾಡುತ್ತಿದ್ದಾರೆ. ಮೂವರಲ್ಲಿ ದೈವತ್ವದ ಒಬ್ಬನನ್ನೆ ಕಾಣುವುದರ ಬಗ್ಗೆ ನಾವು ಪೂರ್ಣವಾಗಿ ಅರ್ಥಮಾಡಿಕೊಳ್ಳಲಾರೆವು ಆದರೆ ವಿಶ್ವಾಸದಿಂದ ಅದನ್ನು ಒಪ್ಪಕೊಳ್ಳುತ್ತೇವೆ ಯಾಕೆಂದರೆ ಅದರ ಕುರಿತು ಬೈಬಲ್ ಉಪದೇಶಿಸುತ್ತಿದೆ.

[21]ಪರೀಕ್ಷಿಸುವುದರಲ್ಲಿ ದೇವರ ಒಳ್ಳೆಯದಕ್ಕೆ ಅಲ್ಲ, ನಮ್ಮ ಒಳ್ಳೆಯದಕ್ಕೆ, ದೇವರಿಗೆ ರುಜು ಬೇಕಾ ಗಿಲ್ಲ ನಮಗೆ ರುಜು ಬೇಕು, ಆದ್ದರಿಂದ ಸಂಘಟನೆಯ ವಿವರಗಳು ನಮಗಾಗಿ ಬರೆಯಲ್ಪಟ್ಟಿವೆ. [22]ಲೂಕ 4:2ರಲ್ಲಿ ನಾಲ್ವತ್ತು ದಿವಸಗಳು ಪೂರ್ತಿಯಾಗಿ ಕರ್ತನು ಶೋಧಿಸಲ್ಪಟ್ಟನೆಂದು ಸೂಚಿಸುತ್ತದೆ. ಆತನು ಅನುಭವಿಸಿದ ಶೋಧನೆಗಳಲ್ಲಿ ಆ ಮೂರು ಶಿಖರಗಳನ್ನು ಸೇರಿರ ಬಹುದು. ಲೂಕ ಒಂದು ಕ್ರಮದಲ್ಲಿ, ಮತ್ತಾಯ ಮತ್ತೊಂದು ಕ್ರಮದಲ್ಲಿ ಅವುಗಳನ್ನು ದಾಖಲಿಸಿದ್ದಾರೆ. ಅನೇಕ ವಾಖ್ಯಾನಕಾರರು ಮತ್ತಾಯನ ಕ್ರಮ ಸಂಖ್ಯೆಯು ಕಾಲಾನುಸಾರವಾದ ಕ್ರಮದಲ್ಲಿವೆ ಎಂದು ಹೇಳುತ್ತಾರೆ ಈ ಪದ್ಧತಿಯನ್ನು "ಯೇಸುವಿನ ಶೋಧನೆ" ಎಂಬ ಪಾಠದಲ್ಲಿ ಉಪಯೋಗಿಸಲಾಗಿದೆ. ಖಚಿತವಾದ ಕಾಲಾನುಕ್ರಮ ಅಷ್ಟು ಪ್ರಾಮುಖ್ಯವಲ್ಲ. [23]ಕರ್ತನಾದ ಯೇಸು ಹೇಗೆ ಶೋಧಿಸಲ್ಪಟ್ಟನು ಎನ್ನುವ ಅನೇಕ ಚರ್ಚೆಗಳಲ್ಲಿ ಮಿತವುಳ್ಳ ಮನಸ್ಸುಗಳು ತಿಳಿಸುವುದಿಲ್ಲ. [24]ಯೇಸು ಪಾಪ ರಹಿತ ಜೀವಿತಕ್ಕೆ ಯೋಹಾನ 8:46; ಇಬ್ರಿಯ 7:26; 1 ಪೇತ್ರ 1:19; 1 ಯೋಹಾನ 3:5ನ್ನು ನೋಡಿ. [25]ಬಂದವರು "ನೀನು ಕ್ರಿಸ್ತನೋ?"

ಎಂದು ಕೇಳಿದರೋ, ಇಲ್ಲವೋ ತಿಳಿಯದು, ಅವರು ಬೇಕೆಂದು ಕೇಳಿದ್ದು ಅದೇ ಎಂದು ಯೋಹಾನನು ಗ್ರಹಿಸಿಕೊಂಡನೆಂದು ನಿಮಗೆ ಇತ್ತು. [26]ಯೇಸುವಿನಲ್ಲಿ ಆ ಪ್ರವಾದನೆ ನೆರವೇರಿತು (ಅಪೊಸ್ತಲರ ಕೃತ್ಯಗಳು 3:20. 22). [27]NASB ಯಲ್ಲಿ ಮಾರ್ಕ 1:2, 3ರಲ್ಲಿ ಯೆಶಾಯನು ಮಾತ್ರ ಪ್ರಸ್ತಾಪಿಸಲ್ಪಟ್ಟಿದ್ದಾನೆ. ಆದರೆ ಪ್ರವಚನಗಳು ಯೆಶಾಯ, ಮಲಾಕಿ ಎನ್ನುವ ಇಬ್ಬರಿಂದ ಪ್ರಸ್ತಾಪಿಸಲ್ಪಟ್ಟಿವೆ. ಕೆಲವು ಭಾಷಾಂತರಗಳಲ್ಲಿ ಸಾಮಾನ್ಯದ ಪ್ರತಿಪಾದನೆ ಹೀಗೆ ಇದೆ: "ಪ್ರವಾದಿಯ ಮುಖಾಂತರ ಬರೆದಂತೆ ..." (KJVಯನ್ನು ನೋಡಿರಿ). [28]ನಿಜವಾದ ಏಲೀಯನ ಬರೋಣಕ್ಕಾಗಿ ಅನೇಕ ಯೆಹೋದ್ಯರು ಇಂದಿಗೂ ಎದುರು ನೋಡುತ್ತಿ ದ್ದಾರೆ. [29]ಆತನ ಸೇವೆ, ಕರ್ತನ ಸೇವೆಯು ಒಂದರ ಮೇಲೊಂದು ಬಿದ್ದಿವೆ. ಆ ಸಮಯದಲ್ಲಿ ಯೋಹಾನನು ಕೆಲಸ ಕಡಿಮೆಯಾಗಿತ್ತು. ಕರ್ತನ ಕೆಲಸ ಹೆಚ್ಚಾತ್ತಾ ಬಂತು. ಯೋಹಾನ 3:22-4:2ವರೆಗೆ ನೋಡಿ. [30]ದೀಕ್ಷಾಸ್ನಾನಕ್ಕೆ ಕರ್ತನು ನಡೆದುಹೋಗಿದ್ದು, ಆ ಸಮಯದಲ್ಲಿ ಯೋಹಾನನು ಎಲ್ಲಿದ್ದನೋ ಅನ್ನುವುದರ ಮೇಲೆ ಆಧಾರವಾಗಿದೆ.

[31]ಅನ್ವಯಿಸಿಕೊಳ್ಳುವ ಮತ್ತೊಂದು ವಿಷಯ ಇಲ್ಲಿದೆ: "ಮುಖ್ಯವಾದ ಕಾಯವನ್ನು ಮಾಡಲು ಸಿದ್ಧತೆ ಅವಶ್ಯಕವಾಗಿದೆ ಎಂಬ ಪಾಠವು ಇದು ನೀಡುತ್ತಿದೆ. ನೀನು ಒಂದು ಕೆಲಸವನ್ನು ಆಸಕ್ತಿಯಿಂದ ಪ್ರಾರಂಭಿಸುವವನಾಗಿದ್ದು ಅದನ್ನು ಮುಂದುವರೆಸದೇ ಇದ್ದರೇ ಈ ಪಾಠವು ನಿನಗೆ ಆ ಕೆಲಸವನ್ನು ಪೂರೈಸಲು ಪ್ರೋತ್ಸಾಹಿಸುವಂತದದ್ದಾಗಿದೆ!"